ದಿನಾಂಕಃ 06.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ. ಎಸ್. ಎಮ್. ಹೆಚ್ ವಕೀಲರಿಂದಃ**

ನಾನು, ನನ್ನ ಹೆಂಡತಿ ಮಕ್ಕಳು ಒಂದೇ ಮನೆಯಲ್ಲಿ ಅನೋನ್ಯವಾಗಿ ವಾಸವಾಗಿದ್ದೇವು. ನಮ್ಮ ಮನೆತನದ ಆಗು ಹೋಗುಗಳನ್ನು ನಾನೇ ನೋಡಿಕೊಳ್ಳುತ್ತಿದ್ದೆ. ನನ್ನ ಮಕ್ಕಳ ಮದುವೆಯನ್ನು ನಾನೇ ಮಾಡಿರುತ್ತೇನೆ. ನಮ್ಮ ಮನೆಗೆ ನಾನೇ ಯಜಮಾನ ಎಂದರೆ ನಿಜ. ದಾವೆ ಹಾಕುವ ಪೂರ್ವದಲ್ಲಿ ವಾದಿಯರು ತಮ್ಮ ವಕೀಲರ ಮೂಲಕ ನಮಗೆ ನೋಟೀಸನ್ನು ನೀಡಿದ್ದರು ಎಂದರೆ ನಿಜ. ಸದರಿ ನೋಟೀಸಿಗೆ ಉತ್ತರ ನೀಡಿರುತ್ತೀರಾ? ಎಂದರೆ ಕಳಸನ್ನವರ ವಕೀಲರು ನೀಡಿರುತ್ತಾರೆಂದು ನುಡಿಯುತ್ತಾರೆ. ಸದರಿ ವಕೀಲರಿಗೆ ನೋಟೀಸಿಗೆ ಪ್ರತ್ಯುತ್ತರ ನೀಡಲು ಯಾರು ಮಾಹಿತಿ ಕೊಟ್ಟಿರುತ್ತಾರೆಂದರೆ ಸಾಕ್ಷಿಯು ನಾನು ಯಾವುದೇ ಮಾಹಿತಿಯನ್ನು ನೀಡಿಲ್ಲ ಎಂದು ನುಡಿಯುತ್ತಾರೆ.

ದಾವೆ ಹೂಡಿದ ನಂತರ ನ್ಯಾಯಾಲಯದಿಂದ ನನಗೆ ಹಾಗೂ ನನ್ನ ಮಕ್ಕಳಿಗೆ ಸಮನ್ಸ ಬಂದಿರುತ್ತವೆ. ನಾವು ಕಳಸನ್ನವರ ವಕೀಲರನ್ನು ನಮ್ಮ ಪರವಾಗಿ ನೇಮಿಸಿಕೊಂಡಿರುತ್ತೇವೆ. ವಾದಿಯರ ದಾವೆಗೆ ತಕರಾರು ಸಲ್ಲಿಸಿರುತ್ತೇವೆ. ವಕೀಲರ ಮೂಲಕ ಸಲ್ಲಿಸಿದ ಕೈಫೀಯತ್ತಿಗೆ ಸಹಿ ಮಾಡಿರುತ್ತೀರಾ?ಎಂದರೆ ಸಾಕ್ಷಿಯು ನಾವು ಸಹಿ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ವಕಾಲತ್ತ ಪತ್ರಕ್ಕೆ ಸಹಿ ಹಾಕಿರುತ್ತೇವೆ. ಕೈಫೀಯತ್ತಿಗೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ವಕೀಲ ಪತ್ರವನ್ನು ತೋರಿಸಿ ಕೇಳಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, 2 ರಿಂದ 4ನೇ ಪ್ರತಿವಾದಿಯರ ಸಹಿಯನ್ನು ಗುರುತಿಸಲು ನಿರಾಕರಿಸಿರುತ್ತಾರೆ. ಅದೇ ರೀತಿ ಸಾಕ್ಷಿಗೆ ಪ್ರತಿವಾದ ಪತ್ರದಲ್ಲಿರುವ ತನ್ನ ಸಹಿಯನ್ನು

ಗುರುತಿಸಲು ಸೂಚಿಸಿದ್ದು, ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

ಪ್ರಸ್ತುತ ದಾವೆಗೆ ನನ್ನ ಮಕ್ಕಳು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ಪ್ರಸ್ತುತ ದಾವೆಗೆ ನಾನು ಸಲ್ಲಿಸಿದ ತಕರಾರನ್ನು ನನ್ನ ಮಕ್ಕಳು ಸಹ ಅಳವಡಿಸಿಕೊಳ್ಳುತ್ತಾರೆಂದು ಹೇಳಿ ನಾನು ವಕೀಲರಿಗೆ ಮೆಮೋ ಸಲ್ಲಿಸಲು ಮಾಹಿತಿ ನೀಡಿರುವುದಿಲ್ಲ. ಸಾಕ್ಷಿಗೆ ನಿಪಿ.23 ನ್ನು ತೋರಿಸಿ ಕೇಳಲಾಗಿ ಸಾಕ್ಷಿಯು ತನ್ನ ಮೂರು ಜನ ಮಕ್ಕಳಾದ 2 ರಿಂದ 4 ನೇ ಪ್ರತಿವಾದಿಯರ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.23(ಎ) ದಿಂದ (ಸಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ತನ್ನ ಹಾಗೂ ತನ್ನ ಮಗಳು ಲಕ್ಷ್ಮಿ ಇವರ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.23(ಡಿ) ಹಾಗೂ ನಿಪಿ.23(ಇ) ಎಂದು ಗುರುತಿಸಲಾಯಿತು. 2 ನೇ ಪ್ರತಿವಾದಿ ಗಜಾನಂದ ಕೆಲವು ಸಲ ಸಹಿ ಮಾಡುತ್ತಾನೆ ಕೆಲವು ಸಲ ಹೆಬ್ಬೆಟ್ಟಿನ ಗುರುತು ಹಾಕುತ್ತಾನೆಂದರೆ ಸಾಕ್ಷಿಯು ಸಹಿ ಮಾತ್ರ ಹಾಕುತ್ತಾನೆಂದು ನುಡಿಯುತ್ತಾರೆ.

ಸಾಕ್ಷಿಗೆ ನಿಪಿ.5(ಬಿ) ಎಂದು ಗುರುತಿಸಲಾದ ಸಹಿ ನನ್ನದು ಇರುತ್ತದೆ. ಸಾಕ್ಷಿಗೆ ನಿಪಿ.5 ರಲ್ಲಿ ಉಳಿದ ಸಹಿಗಳನ್ನು ತೋರಿಸಲಾಗಿ ಅವು ಯಾರ ಸಹಿ ಇರುತ್ತವೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ.5(ಎಫ್) ಎಂದು ಗುರುತಿಸಲಾದ ಭಾವಚಿತ್ರ ನನ್ನದು ಇರುತ್ತದೆ. ಅದರ ಎದುರಿಗೆ ಇರುವ ಸಹಿ ನನ್ನದು ಇರುತ್ತದೆ. ಸದರಿ ಸಹಿಯನ್ನು ನಿಪಿ.5(ಎಲ್) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಡಿ.1 ರಲ್ಲಿರುವ ನಿಡಿ.1(ಎ) ಎಂದು ಗುರುತಿಸಲಾದ ಸಹಿ ನನ್ನದು ಇರುತ್ತದೆ. ಅದೇ ರೀತಿ ನಿಡಿ.1ರ ಮೊದಲ ಪುಟದಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನುನಿಡಿ.1(ಬಿ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

<u>ಸಾಕ್ಷಿಯ ಸಹಿ</u>